ಕೊಡೋ ಮರ್ಯಾದೆ ಎಂಥದು ಅಂತ ನನಗೆ ಗೊತ್ತಿಲ್ಲವೇ? ಇರಲಿ. ಆ ಸೋಡಾ ಅಲ್ಲೇ ಕುಡಿತೀನಿ ಬಿಡಿ" ಅನ್ನುತ್ತಾ ಅಲ್ಲಿಂದ ಎದ್ದು ಹೊರಟರು. ಹಾಗೆಯೇ ನಡೆದುಕೊಂಡು ಬಂದು 'ಪೆಂಡೆಂ ಸೋಡಾ ಸೆಂಟರ್' ಅಂಗಡಿಯ ಹತ್ತಿರ ಬಂದು ನಿಂತರು. ಅಲ್ಲಿದ್ದ ಕುರ್ಚಿಯೊಂದರಲ್ಲಿ ಕುಳಿತು ದಣಿವಾರಿಸಿಕೊಳ್ಳುತ್ತಾ, "ಇಲ್ಲಿಗೆ ಬಂದು ನಿಂತಿದೆ ನನ್ನ ಪರಿಸ್ಥಿತಿ ಚಂದ್ರಣ್ಣನವರೆ. ಊರಿನವರು ನಮಗೆ ಕುಡಿಯಲು ನೀರು ಸಹಾ ಕೊಡ್ತಿಲ್ಲ ಮಾರಾಯ್ರೆ" ಅಂದರು ನಗುತ್ತಾ.

ಚಂದ್ರಣ್ಣ ಅದಕ್ಕೇನೂ ಉತ್ತರಿಸಲಿಲ್ಲ. ಮೊದಲಿಗೆ ಅವರಿಗೆ ಕುಡಿಯಲು ನೀರು ಕೊಟ್ಟು, ನಂತರ ತಣ್ಣಗಿನ ಸೋಡಾ ಅವರ ಕೈಗಿತ್ತು ಭಕ್ತಿಯಿಂದ ಅವರ ಪಕ್ಕದಲ್ಲಿ ನಿಂತು ನಂತರ ಗಂಟಲು ಸರಿಮಾಡಿಕೊಳ್ಳುತ್ತಾ ದುಗುಡ ತುಂಬಿದ ದನಿಯಲ್ಲಿ, "ಶ್ರೀರಾಮುಲು ಅವರೇ ಎಂಥದಿದೆಲ್ಲಾ. ಹೀಗ್ಯಾಕೆ?" ಅಂದ.

ಆ ಹಿರಿಯ ಸಣ್ಣಗೆ ನಕ್ಕು, "ಹರಿಜನರ ದೇವಸ್ಥಾನ ಪ್ರವೇಶಕ್ಕಾಗಿ ಹೋರಾಡುತ್ತಾ ಅಲ್ಲಿನ ಕೇರಿಗಳಲ್ಲಿ ಓಡಾಡ್ತಿದ್ದೀನಲ್ಲವೇ? ಮೈಲಿಗೆಯಂತೆ! ಅದಕ್ಕೆ ನನಗೆ ನೀರು ಕೊಡಲು ಹಿಂಜರಿಕೆ" ಅಂದರು.

ಚಂದ್ರಣ್ಣ ಬಹಳ ಹೊತ್ತು ಸುಮ್ಮನಿದ್ದ.

ನಂತರ ನಿಧಾನವಾಗಿ, "ಶೆಟ್ರೇ, ನಿಮ್ಮ ಮೇಲಾಣೆ. ಊರಿನವರ ನೀರಿಗೆ ಮೈಲಿಗೆ ಆಗುತ್ತದೇನೋ ಗೊತ್ತಿಲ್ಲ. ಆದರೆ ಈ ಪೆಂಡೆಂ ಸೋಡಾ ಸೆಂಟರ್‌ನ ನೀರಿಗಾಗಲೀ, ಸೋಡಾ ಆಗಲಿ ಮೈಲಿಗೆ ಆಗೋದಿಲ್ಲ, ನಂಬಿ."

ಪೂರ್ವದ ಕರಾವಳಿಯಲ್ಲಿ ಕಡಲಿನ ಪಕ್ಕದಲ್ಲೆ ಇದ್ದ ಆ ಊರಿನ ಹೆಸರು ಕಾವಲಿ. ತೆಲುಗಿನಲ್ಲಿ ಭವಿಷ್ಯದ ಕಾಲಜ್ಞಾನವನ್ನು ರಚಿಸಿದ ವೀರಬ್ರಹ್ಮೇಂದ್ರ ಸ್ವಾಮಿಗಳು, "ನೆಲ್ಲೂರು ಕಡಲಮಟ್ಟದ್ದು ಆದರೆ, ಕಾವಲಿ ಕನಕಪಟ್ಟಣ" ಎಂದಿದ್ದರಂತೆ. ಆ ಅವಧೂತನ ವಾಕ್ ಆಶೀರ್ವಾದದಿಂದ ಕಾವಲಿ ಅಂದಿನಿಂದಲೂ ಸಮಾ ವಹಿವಾಟಿನ ಕನಕಪಟ್ಟಣವೇ.

ಸ್ವಾತಂತ್ರ್ಯ ಹೋರಾಟಗಾರ ಪೊಟ್ಟಿಶ್ರೀರಾಮುಲು ಕಾವಲಿ ತಾಲೂಕಿನವರು. ಗುರುನಾಥ ಶೆಟ್ಟರದು ಕಾವಲಿ. ಹಾಗೆ ಬಹಳಷ್ಟು ಸಾಹುಕಾರರೂ ಕಾವಲಿಯವರೇ. ಆದರೆ ಪೆಂಡೆಂ ಚಂದ್ರಣ್ಣ ಕಾವಲಿಯವರಲ್ಲ ಮೂಲತಃ ಚೀರಾಲದವರು. ಕೈಮಗ್ಗದ ಬಟ್ಟೆಗಳಿಗಾಗಿ ಹೆಸರುವಾಸಿಯಾದದ್ದು 'ಚೀರಾಲ'.

ನೇಕಾರರ ಮನೆತನದಲ್ಲಿ ಹುಟ್ಟಿದ್ದ ಚಂದ್ರಣ್ಣ ಎಲ್ಲರಂತೆ ಕೈಮಗ್ಗದ ಮುಂದೆ ಕುಳಿತಿದ್ದರೆ ಚೀರಾಲದಲ್ಲಿ ನೇಕಾರಿಕೆಯಲ್ಲಿ ಹೆಸರುಮಾಡಿರುತ್ತಿದ್ದ. ಆದರೆ ಗಾಂಧೀಜಿಯವರ ಕರೆಗೆ ಓಗೊಟ್ಟ ಲಕ್ಷಾಂತರ ಯುವಕರಲ್ಲಿ ಚಂದ್ರಣ್ಣನೂ ಒಬ್ಬ. ಇನ್ನೂ ಮೀಸೆ ಬಲಿತಿರಲಿಲ್ಲ. ಆಗಲೇ ತನ್ನದೆಲ್ಲವನ್ನು ಸ್ವಾತಂತ್ರ್ಯ ಹೋರಾಟಕ್ಕೆ ದೇಣಿಗೆಯಾಗಿ ಕೊಟ್ಟು ಬರಿಗೈಲಿ ನಿಂತುಬಿಟ್ಟಿದ್ದ. ಇವನನ್ನ ನೋಡಿ ಸ್ವಂತ ಕುಲದವರೇ ಗೇಲಿ ಮಾಡಿದ್ದರು. "ಇವನಿಗೆ ಹೆಣ್ಣು ಕೊಡೋದು ದಂಡ ಮಾರ್ರೆ, ಕುಲಕಸುಬು ಕಲಿಯದ ಇವ ಇನ್ನೆಂಥ ಮಾಡ್ತಾನೆ. ಇವ ಬದುಕು ನಡೆಸುವುದಾದರೂ ಹೇಗೆ ಮಾರ್ರೆ..." ಅಂದು ಹಂಗಿಸುತ್ತಿದ್ದರು.

ಇನ್ನು ಊರಲ್ಲಿರುವುದು ವ್ಯರ್ಥವೆನಿಸಿ ಎರಡು ಜೊತೆ ಬಟ್ಟೆ ಗಂಟುಕಟ್ಟಿ ಚೀರಾಲದಿಂದ ಹೊರಟು ದಕ್ಷಿಣದ ಕಡೆ ನೆಲ್ಲೂರಿನವರೆಗೂ ಪ್ರಯಾಣ ಮಾಡಿದ. ದಾರಿಯ ಯಾವ ಊರಿನಲ್ಲಿ ಅನುಕೂಲವಿದ್ದರೆ ಅಲ್ಲೇ ನೆಲೆ ನಿಲ್ಲಬೇಕೆಂದುಕೊಂಡು ಕಡೆಗೆ ನೆಲ್ಲೂರಿಗೆ ಬಂದಿದ್ದ. ನೆಲ್ಲೂರು ಸಹ ದೊಡ್ಡ ಪಟ್ಟಣದ ಹಾಗೆನಿಸಿತ್ತು. ಹತ್ತಿರದಲ್ಲಿದ್ದ ಕಾವಲಿ ಎಂಬ ಊರು ಸಣ್ಣ ಹಳ್ಳಿಯೂ ಅಲ್ಲ, ದೊಡ್ಡ ಪಟ್ಟಣವೂ ಅಲ್ಲವೆನಿಸಿ ಅಲ್ಲಿ ನೆಲೆಯೂರಬೇಕೆಂದುಕೊಂಡ. ಕಾವಲಿಗೆ ಆನಿಸಿದಂತಿರುವ ಹೆದ್ದಾರಿಯ ಪಕ್ಕದಲ್ಲಿ ಸಣ್ಣ ಗುಡಿಸಲು ಹಾಕಿಕೊಂಡ.